
**ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ**

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ 20 | ಫೆಬ್ರವರಿ 2021 | ಸಂಚಿಕೆ 1



**11 ಮೇ 1895 – 17 ಫೆಬ್ರವರಿ 1986**

**ಆತ್ಮೀಯ ಸಹಪಯಣಿಗರಿಗೆ, ಶುಭಾಶಯಗಳು. ನಮ್ಮ ಈ 'ಸಹಪಯಣ' ವಾರ್ತಾಪತ್ರಿಕೆ ಸುಮಾರು ಇಪ್ಪತ್ತೊಂದು ವರ್ಷಗಳ ಕಾಲ ಮುದ್ರಿತರೂಪದಲ್ಲಿ ಪ್ರಕಟಗೊಳ್ಳುತ್ತಿದೆ. ಈ ಸಂಚಿಕೆ, ಮುದ್ರಿತರೂಪದ ಕೊನೆಯ ಸಂಚಿಕೆಯಾಗಿದೆ. ಮುಂದಿನ ಸಂಚಿಕೆಯಿಂದ ಸಹಪಯಣ ಪತ್ರಿಕೆ ಡಿಜಿಟಲ್ ರೂಪದಲ್ಲಿ ಮಾತ್ರ ಪ್ರಕಟವಾಗಲಿದೆ. ಈ ಮುಂದಿನ ಸಂಚಿಕೆಗಳು www.kfistudy.org ಅಂತರ್ಜಾಲತಾಣದಲ್ಲಿ ಲಭ್ಯವಾಗಲಿವೆ. ವೈಯುಕ್ತಿಕವಾಗಿ ಪಡೆಯಲಿಚ್ಛಿಸುವವರು kfistudy@gmail.com ಮಿಂಚಂಚೆ ವಿಳಾಸಕ್ಕೆ ವಿಷಯದಲ್ಲಿ 'ಸಹಪಯಣ' ನಮೂದಿಸಿ ಮಿಂಚಂಚೆ ಕಳಿಸಿ. ನಿಮ್ಮ ಸಹಕಾರಕ್ಕೆ ಧನ್ಯವಾದಗಳು.**

## ಕೃಷ್ಣಮೂರ್ತಿ ಆತ್ಮಸಂಗತ – ಕೊನೆಯ ಪುಟ, 30 ಮಾರ್ಚ್, 1984

ಸುಂದರವಾದ ಮುಂಬೆಳಗಿನಲ್ಲಿ ನೇರ ರಸ್ತೆಯಲ್ಲಿ ನಡೆಯುತ್ತಿರುವಾಗ, ಆಕಾಶ ಅಸಾಧಾರಣ ನೀಲಿ ಬಣ್ಣದಿಂದ ಬೆಳಗುತ್ತಿದೆ. ಅದು ವಸಂತಕಾಲ. ಗಗನದಲ್ಲಿ ಒಂದೇ ಒಂದು ಮೋಡವಿಲ್ಲ, ಬೆಚ್ಚನೆಯ ಸೂರ್ಯ ಮೂಡಿದ್ದಾನೆ. ವಾತಾವರಣ ಇನ್ನೂ ಬಿಸಿಯಾಗಿಲ್ಲ. ಹಿತಕರ ವಾತಾವರಣ. ಎಲೆಗಳು ಹೊಳೆಯುತ್ತಿವೆ, ಅದರ ಹೊಳವು ವಾತಾವರಣದಲ್ಲಿದೆ. ಅದು ನಿಜಕ್ಕೂ ಅಸಾಧಾರಣ ಚೆಲುವಿನ ಬೆಳಗು. ಅಲ್ಲಿ ಅಭೇದ್ಯವಾದ ಎತ್ತರದ ಪರ್ವತವಿದೆ. ಕೆಳಗಿರುವ ಗುಡ್ಡಗಳು ಹಸಿರಾಗಿವೆ, ಸುಂದರವಾಗಿವೆ. ಹೆಚ್ಚು ಯೋಚಿಸದೆ ಮುಂದೆ ನಡೆಯುತ್ತಿರುವಾಗ, ಬಾಡಿದ ಎಲೆ ನಿಮ್ಮ ಕಣ್ಣಿಗೆ ಬಿದ್ದಿದೆ. ಹಳದಿ ಹಾಗೂ ಹೊಳೆವ ಕೆಂಬಣ್ಣದ, ಶರತ್ಕಾಲದ ಎಲೆ. ಆ ಎಲೆ ಎಷ್ಟು ಸುಂದರವಾಗಿದೆ, ಅದು ತನ್ನ ಬಾಡುವಿಕೆಯಲ್ಲೂ ಸುಂದರವಾಗಿದೆ, ಸರಳವಾಗಿದೆ, ಜೀವಂತವಾಗಿದೆ. ಆ ಇಡಿ ಮರದ ಹಾಗೂ ಬೇಸಗೆಯ ಚೆಲುವು ಮತ್ತು ಚೈತನ್ಯ ಆ ಎಲೆಯಲ್ಲಿ ಸನ್ನಿಹಿತವಾಗಿದೆ. ವಿಚಿತ್ರವೆಂದರೆ

ಆ ಎಲೆ ಇನ್ನೂ ಕೆಳಕ್ಕೆ ಉದುರಿಲ್ಲ. ಅದನ್ನು ತುಂಬ ಸಮೀಪದಿಂದ ನೋಡಿದಾಗ, ಅದರ ನರಗಳು ಕಾಣುತ್ತಿವೆ. ಅದರ ಕಾಂಡ ಹಾಗೂ ಒಟ್ಟು ಎಲೆಯ ಆಕಾರ ನಿಮ್ಮ ಮುಂದಿದೆ. ಆ ಎಲೆಯೇ ಮರ.

ಮನುಷ್ಯರು ಯಾಕೆ ಇಷ್ಟು ಕರುಣಾಜನಕವಾಗಿ, ದುಃಖದಿಂದ, ರೋಗ ರುಜಿನಗಳಿಂದ, ವೃದ್ಧಾಪ್ಯ, ಮುದುಡಿದ ದೇಹ ಹಾಗೂ ಮುದಿತನದಿಂದ ಸಾಯುತ್ತಾರೆ? ಅವರೇಕೆ ಸಹಜವಾಗಿ ಸಾಯಬಾರದು? ಅವರೇಕೆ ಈ ಎಲೆಯಂತೆ ಸುಂದರವಾಗಿ ಸಾಯಬಾರದು? ನಮಗೇನು ತೊಂದರೆ? ವೈದ್ಯರು, ಔಷಧಗಳು, ಆಸ್ಪತ್ರೆಗಳು, ಶಸ್ತ್ರ ಚಿಕಿತ್ಸೆಗಳು ಮತ್ತು ಬದುಕಿನ ವಿಷಣ್ಣತೆಗಳು, ಸುಖಗಳು ಇವೆಲ್ಲವುಗಳ ನಡುವೆ ಸರಳತೆಯಿಂದ, ಘನತೆಯಿಂದ ಮುಗುಳ್ನಗೆಯೊಂದಿಗೆ ನಾವೇಕೆ ಸಾಯುವುದಿಲ್ಲ?

ಒಂದು ಸಲ, ಓಣಿಯೊಂದರಲ್ಲಿ ನಡೆದು ಬರುತ್ತಿರುವಾಗ, ಹಿಂದಿನಿಂದ ಏನೋ ಒಂದು ಮಧುರವಾದ, ಲಯಬದ್ಧವಾದ, ಪ್ರಾಚೀನ ಕಸುವಿನ ಸಂಸ್ಕೃತದ ಹಾಡೊಂದು ಕೇಳಿಬಂದಿತು. ಅಲ್ಲೇ ನಿಂತು ಸುತ್ತ ನೋಡಿದೆ. ಅರೆಬತ್ತಲೆಯ ವ್ಯಕ್ತಿಯೊಬ್ಬ, ಹಿರಿಯಮಗ ಉರಿಯುತ್ತಿರುವ ದೀಪ ಹೊತ್ತ ಮಣ್ಣಿನ ಮಡಕೆ ಹೊತ್ತು ನಡೆಯುತ್ತಿದ್ದ. ಆತ ಅದನ್ನು ಇನ್ನೊಂದು ಪಾತ್ರೆಯಲ್ಲಿಟ್ಟುಕೊಂಡು ಸಾಗುತ್ತಿದ್ದ. ಅವನ ಹಿಂದೆ ಇನ್ನಿಬ್ಬರು ಮೈಮೇಲೆ ಬಿಳಿಯ ವಸ್ತ್ರ ಹೊದೆಸಿದ ತೀರಿಕೊಂಡ ತಂದೆಯನ್ನು ಹೆಗಲ ಮೇಲೆ ಹೊತ್ತು ಬರುತ್ತಿದ್ದರು; ಅವರೂ ಏನನ್ನೋ ಮಣಮಣ ಹೇಳುತ್ತಿದ್ದರು. ಅವರ ಮಂತ್ರ ಏನು ಎಂಬುದು ತಿಳಿಯಿತು. ಅವರ ಮಂತ್ರಪಠನದಲ್ಲಿ ಈತನೂ ಹೆಚ್ಚು ಕಡಿಮೆ ಸೇರಿಕೊಂಡ. ಅವರು ಮುಂದೆ ಹೋದರು. ಅವರನ್ನು ಅನುಸರಿಸಿ ಇನ್ನೊಬ್ಬ ಹೋದ. ಅವರು ದಾರಿಯಲ್ಲಿ ಮಂತ್ರಪಠನ ಮಾಡುತ್ತಾ ಸಾಗುತ್ತಿದ್ದರು. ಹಿರಿಯ ಮಗನ ಕಣ್ಣಾಲಿಗಳಲ್ಲಿ ಕಣ್ಣೀರು. ತಂದೆಯನ್ನು ಕಡಲತಡಿಗೆ ಹೊತ್ತೊಯ್ದರು. ಅಲ್ಲಿ ಆಗಲೆ ಚಿತೆ ಸಿದ್ಧವಾಗಿತ್ತು. ಮೃತದೇಹವನ್ನು ಚಿತೆಯ ಮೇಲಿರಿಸಿ ಅದಕ್ಕೆ ಅಗ್ನಿಸ್ಪರ್ಶ ಮಾಡಿದರು. ಇದೆಲ್ಲ ತೀರ ಸಹಜ, ಸರಳವೆಂಬಂತೆ ನಡೆಯಿತು. ಹೂಗಳಿಲ್ಲ, ಶವ ವಾಹನವಿಲ್ಲ, ಕಪ್ಪು ಬಂಡಿಗಳಿಲ್ಲ, ಅವುಗಳನ್ನು ಎಳೆಯುವ ಕಪ್ಪು ಕುದುರೆಗಳಿಲ್ಲ. ಶಾಂತವಾದ ಘನತೆವೆತ್ತ ರೀತಿ ಈ ಕ್ರಿಯೆ ನಡೆದಿದೆ. ಮರದ ಒಂದು ಎಲೆ, ಸಾವಿರ ಎಲೆಗಳತ್ತ ದೃಷ್ಟಿ ಬೀರಿದೆ. ಚಳಿಗಾಲ ಆ ಎಲೆಯನ್ನು ಅದರ ತಾಯಿಯಿಂದ ಬೇರ್ಪಡಿಸಿ ರಸ್ತೆಗೆ ಬೀಳಿಸಿದೆ. ಅದು ಇನ್ನೇನು ಪೂರ್ತಿ ಒಣಗಿಹೋಗಲಿದೆ, ನಶಿಸಲಿದೆ, ಸದ್ಯದಲ್ಲೇ ಗಾಳಿ ಅದನ್ನೂ ಹೊತ್ತೊಯ್ಯಲಿದೆ. ಅದು ಮುಂದೆ ಯಾರ ಕಣ್ಣಿಗೂ ಬೀಳುವುದಿಲ್ಲ.

> "ಸಂಘರ್ಷವಿಲ್ಲದೇ, ಸೌಂದರ್ಯ ಮತ್ತು ಪ್ರೀತಿಯೊಂದಿಗೆ ಬದುಕುವ ಮನುಷ್ಯ, ಸಾವಿಗೆ ಹೆದರುವುದಿಲ್ಲ – ಏಕೆಂದರೆ, ಪ್ರೀತಿಸುವುದೆಂದರೆ ಸಾಯುವುದೇ."
>
> – ಜೆ. ಕೃಷ್ಣಮೂರ್ತಿ

ನೀವು ಮಕ್ಕಳಿಗೆ ಗಣಿತ, ಬರವಣಿಗೆ, ಓದು ಹಾಗೂ ಜ್ಞಾನ ಸಂಪಾದನೆಯ ಕ್ರಮಗಳನ್ನೆಲ್ಲ ಹೇಳಿಕೊಡುತ್ತೀರಿ, ಆದರೆ ಅವರಿಗೆ ಸಾವಿನ ಮಹಾನ್ ಘನತೆಯ ಬಗ್ಗೆ ಹೇಳಿಕೊಡಬೇಕು. ಮಾರಕವೂ ದುಃಖಕರವೂ ಆದ ಸಾವನ್ನು ಎದುರಿಸಲೇಬೇಕು ಎಂದು ಹೇಳಿಕೊಡುವುದಲ್ಲ, ಬದಲಾಗಿ ಅದು ನಿತ್ಯಜೀವನದ ಒಂದು ಭಾಗ, ದಿನವೂ ನೀಲಗಗನವನ್ನು, ಎಲೆಯ ಮೇಲಿನ ಮಿಡತೆಯನ್ನು ಗಮನಿಸಿದ ಹಾಗೆ ಸಾವನ್ನು ನೋಡಬೇಕು ಎಂಬುದಾಗಿ ಹೇಳಿಕೊಡಬೇಕು. ಇದು ಕಲಿಕೆಯ ಒಂದು ಭಾಗ. ಬಾಲ್ಯದಲ್ಲಿ ಮಕ್ಕಳಿಗೆ ಹಲ್ಲು ಮೂಡುತ್ತದೆ, ಅದರ ಜತೆಗೆ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆ. ಹಾಗೇ ಇದೂ ಕೂಡಾ. ಮಕ್ಕಳಲ್ಲಿ ಅಸಾಧಾರಣ ಕುತೂಹಲವಿರುತ್ತದೆ. ನೀವು ಸಾವಿನ ಸ್ವರೂಪವನ್ನು ಗಮನಿಸಿದರೆ, ಎಲ್ಲರೂ ಸಾಯುತ್ತಾರೆ ಎಂದು ವಿವರಿಸುವುದಿಲ್ಲ, ಎಲ್ಲವೂ ಮಣ್ಣಲ್ಲಿ ಮಣ್ಣಾಗುತ್ತದೆ ಎಂದು ಹೇಳುವುದಿಲ್ಲ. ಆದರೆ ಯಾವುದೇ ಭಯವಿಲ್ಲದೆ ಅದನ್ನು ಸೌಮ್ಯವಾಗಿ ವಿವರಿಸುತ್ತೀರಿ ಮತ್ತು ಜೀವನ ಮರಣ ಎರಡೂ ಒಂದೇ ಎಂದು ಹೇಳುತ್ತೀರಿ; ವ್ಯಕ್ತಿಗೆ ಐವತ್ತು ಅರುವತ್ತು ತೊಂಬತ್ತು ವರ್ಷಗಳಾದಾಗ ಅಂದರೆ ಜೀವನದ ಕೊನೆಯಲ್ಲಿ ಸಾವು ಬರುತ್ತದೆ ಎಂದು ನೀವು ಹೇಳುವುದಿಲ್ಲ. ಬದಲಾಗಿ ಸಾವು ಕೂಡಾ ಎಲೆಯ ಹಾಗೆ ಎಂದು ಹೇಳುತ್ತೀರಿ.

ವಯಸ್ಸಾದ ಸ್ತ್ರೀ ಪುರುಷರನ್ನು ಗಮನಿಸಿ. ಅವರು ಎಷ್ಟು ಕುಗ್ಗಿ ಹೋಗಿರುತ್ತಾರೆ, ಹೇಗೆ ಎಲ್ಲೋ ಕಳೆದು ಹೋಗಿರುತ್ತಾರೆ, ಎಷ್ಟೊಂದು ಅಸಂತೋಷದಿಂದಿರುತ್ತಾರೆ; ಎಂಥ ಕೊಳಕರಂತೆ ಕಾಣುತ್ತಾರೆ? ಅವರು ಜೀವನ ಹಾಗೂ ಮರಣವನ್ನು ನಿಜಕ್ಕೂ ಅರ್ಥಮಾಡಿಕೊಂಡಿಲ್ಲವೇ? ಅವರು ಈ ಬದುಕನ್ನು ಬಳಸಿಕೊಂಡಿದ್ದಾರೆ; ಸ್ವಕ್ಕೆ 'ನಾನು'ವಿಗೆ ಶಕ್ತಿ ತುಂಬುವ ತತ್‌ಕ್ಷಣದ ಸಂಘರ್ಷದಲ್ಲಿ ತಮ್ಮ ಬದುಕು ಹಾಳು ಮಾಡಿಕೊಂಡಿರುತ್ತಾರೆ. ವಿವಿಧ ಸಂಘರ್ಷಗಳಲ್ಲಿ, ಅಸಂತೋಷಗಳಲ್ಲಿ ಅಲ್ಪಸ್ವಲ್ಪ ಖುಷಿ, ಸುಖ, ಕುಡಿತ, ಧೂಮಪಾನ, ತಡರಾತ್ರಿಗಳು ಹಾಗೂ ಕೆಲಸ ಕೆಲಸ ಕೆಲಸಗಳೊಂದಿಗೆ ನಾವು ನಮ್ಮ ದಿನಗಳನ್ನು ಕಳೆದಿರುತ್ತೇವೆ. ಜೀವನದ ಕೊನೆಯಲ್ಲಿ ಈ ಸಾವನ್ನು ಎದುರಿಸಿ ಅದರಿಂದ ಗಾಬರಿಗೊಳ್ಳುತ್ತೇವೆ. ಅದನ್ನು ನಾವು ಅರ್ಥಮಾಡಿಕೊಳ್ಳಬಹುದು. ಗಾಢವಾಗಿ ಪರಿಭಾವಿಸಬಹುದು ಎಂದು ತಿಳಿಯುತ್ತೇವೆ. ಸಾವೆಂಬುದು ರೋಗದ ಮೂಲಕ, ವೃದ್ಧಾಪ್ಯ ಹಾಗೂ ಆಕಸ್ಮಿಕ ಅಪಘಾತದ ಮೂಲಕ ಈ ಶರೀರವನ್ನು ಹಾಳು ಮಾಡುವುದಷ್ಟೇ ಅಲ್ಲ ಪ್ರತಿದಿನದ ಅಂತ್ಯವೂ ವ್ಯಕ್ತಿಯ ಪ್ರತಿದಿನದ ಕೊನೆ ಎಂದು ಕುತೂಹಲಭರಿತ ಮಗುವಿಗೆ ನಾವು ಅರ್ಥಮಾಡಿಸಬಹುದು.

ಪುನರುತ್ಥಾನವೆಂಬುದಿಲ್ಲ; ಅದು ಒಂದು ಮೂಢನಂಬಿಕೆ, ಅಂಧಶ್ರದ್ಧೆ. ಈ ನೆಲದಲ್ಲಿರುವ, ಈ ಸುಂದರ ಭೂಮಿಯ ಮೇಲಿರುವ ಪ್ರತಿಯೊಂದೂ ಬದುಕುತ್ತದೆ, ಸಾಯುತ್ತದೆ, ಅಸ್ತಿತ್ವಕ್ಕೆ ಬರುತ್ತದೆ, ಬಾಡಿ ಕಳಚಿ ಬೀಳುತ್ತದೆ. ಜೀವನದ ಈ ಒಟ್ಟು ಚಲನೆಯನ್ನು ಗ್ರಹಿಸಲು ಧೀಮಂತಿಕೆ ಬೇಕು; ಅಂದರೆ ವಿಚಾರದ, ಗ್ರಂಥಗಳ, ಜ್ಞಾನದ ಧೀಶಕ್ತಿಯಲ್ಲ, ಬದಲಾಗಿ ಸಂವೇದನಾಶೀಲ ಪ್ರೇಮ ಹಾಗೂ ಕರುಣೆಯ ಧೀಮಂತಿಕೆ ಬೇಕು. ಸಾವಿನ ಮಹತ್ತ್ವ ಹಾಗೂ ಅದರ ಘನತೆಯನ್ನು ಶಿಕ್ಷಕ ಅರ್ಥಮಾಡಿಕೊಂಡಲ್ಲಿ ಅದರ ಅಸಾಧಾರಣ ಸರಳತೆಯನ್ನು ಗಾಢವಾಗಿ ಗ್ರಹಿಸಿದ್ದಲ್ಲಿ – ಆಗ ಸಾಯುವಿಕೆ, ಕೊನೆ ಎಂಬುದನ್ನು ದೂರ ತಳ್ಳಬೇಕಾಗಿಲ್ಲ, ಅದರ ಬಗ್ಗೆ ಭಯಪಡಬೇಕಾಗಿಲ್ಲ. ಏಕೆಂದರೆ ಅದು ವ್ಯಕ್ತಿಜೀವನದ ಒಂದು

ಭಾಗ ಎಂದು ಮಗುವಿಗೆ, ವಿದ್ಯಾರ್ಥಿಗೆ ನಿರೂಪಿಸಲು ಸಾಧ್ಯವಾಗುತ್ತದೆ. ಆಗ ಮಗು ಅಥವಾ ವಿದ್ಯಾರ್ಥಿ ಬೆಳೆಯುತ್ತಾ ಹೋದಂತೆ ಅಂತ್ಯಕ್ಕೆ, ಕೊನೆಗಾಲಕ್ಕೆ ಹೆದರುವುದಿಲ್ಲ. ನಮಗಿಂತಲೂ ಮೊದಲು ಬದುಕಿದವರು, ಹಿಂದಿನ ತಲೆಮಾರುಗಳು ಈ ನೆಲದಲ್ಲಿ ಇನ್ನೂ ಬದುಕಿದ್ದಿದ್ದರೆ ಎಷ್ಟೊಂದು ಭಯಾನಕವೆನಿಸುತ್ತಿತ್ತು. ಆದಿಯೇ ಅಂತ್ಯವಲ್ಲ.

> “ಬದುಕಿರುವಾಗಲೇ ಕೊನೆಮುಟ್ಟಲು,
> ತಾನು ಏನೂ ಆಗಿಲ್ಲದಿರಲು ಸಾಧ್ಯವೇ?”
>
> – ಜೆ. ಕೃಷ್ಣಮೂರ್ತಿ

ಶಿಕ್ಷಣದಲ್ಲಿ ಸಾವನ್ನು ವಾಸ್ತವ, ಯಥಾರ್ಥ ಎಂದು ಬಿಂಬಿಸಬೇಕೆಂಬ ಆಸೆ. ಅಂದರೆ ಇದು ಯಾರದ್ದೋ ಸಾವಲ್ಲ, ನಮ್ಮಲ್ಲಿ ಪ್ರತಿಯೊಬ್ಬರ ಸಾವು, ನಾವು ಚಿಕ್ಕವರಿರಲಿ, ವಯಸ್ಸಾದವರಿರಲಿ, ನಮ್ಮಲ್ಲಿ ಪ್ರತಿಯೊಬ್ಬರ ಸಾವು. ನಾವು ಈ ಸಂಗತಿಯನ್ನು ಅನಿವಾರ್ಯವಾಗಿ ಎದುರಿಸಲೇಬೇಕು. ಇದು ಬೇಸರದ ವ್ಯವಹಾರವಲ್ಲ. ಕಣ್ಣೀರಿನ ಸಂಗತಿಯಲ್ಲ, ಒಂಟಿತನದ, ಅಗಲಿಕೆಯ ವಿಷಯವಲ್ಲ.

ನಾವು ಎಷ್ಟು ಸುಲಭವಾಗಿ ಕೊಲ್ಲುತ್ತೇವೆ. ಆಹಾರಕ್ಕಾಗಿ ಪ್ರಾಣಿಗಳನ್ನು ಸುಲಭವಾಗಿ ಕೊಲ್ಲುತ್ತೇವೆ; ಅಷ್ಟು ಮಾತ್ರವಲ್ಲದೆ ವಿನೋದಕ್ಕಾಗಿ, ಕ್ರೀಡೆಗಾಗಿ ಅನಗತ್ಯವಾದ ಕೊಲೆಗಳು ನಡೆಯುತ್ತವೆ. ಬೇಟೆ ಕಾಲವೆಂದು ಜಿಂಕೆಯನ್ನು ಕೊಲ್ಲುತ್ತೇವೆ. ಜಿಂಕೆಯನ್ನು ಕೊಲ್ಲುವುದೆಂದರೆ ನಿಮ್ಮ ನೆರೆಮನೆಯವರನ್ನು ಕೊಂದ ಹಾಗೆ. ಪ್ರಕೃತಿಯ ಜತೆಗಿನ ಸ್ಪರ್ಶವನ್ನು ನೀವು ಕಳೆದುಕೊಂಡಿದ್ದೀರಿ, ಈ ನೆಲದ ಜೀವಿಗಳ ಸಂಪರ್ಕ ನಿಮಗಿಲ್ಲ, ಅದಕ್ಕೆ ನೀವು ಪ್ರಾಣಿಗಳನ್ನು ಕೊಲ್ಲುತ್ತೀರಿ. ಯುದ್ಧಗಳಲ್ಲಿ ಎಷ್ಟೊಂದು ರಮ್ಯ, ರಾಷ್ಟ್ರೀಯ, ರಾಜಕೀಯ ಸಿದ್ಧಾಂತಗಳಿಗಾಗಿ ಕೊಲ್ಲುತ್ತೀರಿ. ದೇವರ ಹೆಸರಿನಲ್ಲಿ ಜನರನ್ನು ಕೊಲ್ಲುತ್ತೀರಿ. ಹಿಂಸೆ ಹಾಗೂ ಕೊಲೆ ಒಟ್ಟೊಟ್ಟಿಗೆ ಇವೆ.

ಆ ಚೆಲುವಿನ, ಆ ಬಣ್ಣದ ಬಾಡಿದ ಎಲೆಯನ್ನು ನೋಡುತ್ತಲಿದ್ದರೆ, ಗಾಢವಾದ ಗ್ರಹಿಕೆ, ಎಚ್ಚರ ಮೂಡುತ್ತದೆ; ಅಂತ್ಯದಲ್ಲಲ್ಲ, ಆರಂಭದಲ್ಲೇ ನಮ್ಮ ಸಾವು ಹೇಗಿರಬಹುದು ಎಂಬ ಗ್ರಹಿಕೆ ಮೂಡುತ್ತದೆ. ಸಾವು ಭಯಾನಕವಲ್ಲ, ದೂರೀಕರಿಸುವಂಥದ್ದಲ್ಲ, ಮುಂದೂಡು ವಂಥದ್ದಲ್ಲ, ದಿನದಿನವೂ ಅದು ನಮ್ಮೊಂದಿಗೆ ನಾವು ಅದರೊಂದಿಗೆ ಇದ್ದೇವೆ. ಇದರಿಂದ ಅಗಾಧತೆಯ ಅಸಾಧಾರಣ ಪ್ರಜ್ಞೆ ಹೊರಹೊಮ್ಮುತ್ತದೆ.

Dear Readers, season’s greetings. ‘Sahapayana’ has been published in print form for over 21 years now. This would be the last issue of Sahapaysna in print. From next issue, Sahapyana would be published in digital form only. Future issues would be available on www.kfistudy.org website for download. Those who wish to receive it personally, may please send an email to kfistudy@gmail.com with ‘Sahapayana’ as the subject. Thank you for your cooperation.

## ಸ್ಮರಣೆ – ಕೃಷ್ಣ ಜಿ. ಕುಲಕರ್ಣಿ



ಕೆ.ಜಿ. ಎಂದೇ ಕೃಷ್ಣಮೂರ್ತಿ ಸ್ನೇಹಿತರ ಬಳಗದ ಹಿರಿಕಿರಿಯರೆಲ್ಲರಿಗೂ ಆತ್ಮೀಯರಾಗಿದ್ದ ಕೃಷ್ಣ ಜಿ. ಕುಲಕರ್ಣಿಯವರು, ಕಳೆದ ಡಿಸೆಂಬರ್ 7ರಂದು ತಮ್ಮ ಎಂಭತ್ತೈದನೇ ವಯಸ್ಸಿನಲ್ಲಿ ನಿಧನರಾದರು. ಕೆ.ಜಿ.ಯವರು ವೃತ್ತಿಯಲ್ಲಿದ್ದಾಗಲೇ ಧಾರವಾಡದ ಕೃಷ್ಣಮೂರ್ತಿ ಅಧ್ಯಯನಕೇಂದ್ರದ ಸಕ್ರಿಯ ಸದಸ್ಯರಾಗಿದ್ದು, ಮೊದಲನೆ ಕರ್ನಾಟಕ ಜೆ.ಕೆ. ಅಧ್ಯಯನ ಶಿಬಿರವನ್ನು ಧಾರವಾಡದಲ್ಲಿ ಆಯೋಜಿಸಿದ್ದರು. ನಿವೃತ್ತರಾದ ನಂತರದ ಸುಮಾರು ಇಪ್ಪತ್ತು ವರ್ಷಗಳ ಕಾಲ ಬೆಂಗಳೂರಿನ ಅಧ್ಯಯನ ಕೇಂದ್ರದ ಸಹವಾಸದಲ್ಲಿದ್ದ ಕೆ.ಜಿ.ಯವರು, ಇಲ್ಲಿನ ಎಲ್ಲಾ ಕನ್ನಡ ಸಂಬಂಧಿತ ಕಾರ್ಯಗಳ ಕ್ರಿಯಾಶಕ್ತಿಯಾಗಿದ್ದರು. ಪ್ರತಿವರ್ಷ ಬೇಸಿಗೆಯಲ್ಲಿ ಕರ್ನಾಟಕ ಜೆ.ಕೆ. ಅಧ್ಯಯನ ಶಿಬಿರ, ಸಹಪಯಣ ತ್ರೈಮಾಸಿಕ ವಾರ್ತಾಪತ್ರಿಕೆ, ಹಲವು ಊರುಗಳ ಶಾಲಾಕಾಲೇಜುಗಳಲ್ಲಿ ನಡೆದ ‘ಹಂಚಿಕೊಳ್ಳುವುದರಲ್ಲಿ ಕಲಿಕೆ’ ಕಾರ್ಯಕ್ರಮಗಳು, ಕೃಷ್ಣಮೂರ್ತಿ ಕೃತಿಗಳ ಅನುವಾದ, ಸಂವಾದ ಇತ್ಯಾದಿ ಕಾರ್ಯಗಳು ಕನ್ನಡದ ಮಾಧ್ಯಮದಲ್ಲಿ ಕೆ.ಜಿ.ಯವರ ಸ್ವಯಂಸೇವೆಯಿಂದ ಆರಂಭವಾಗಿ, ಅವರ ಸಹಾನುಭೂತಿಯ ಮಾರ್ಗದರ್ಶನದಲ್ಲಿ ಕೇಂದ್ರದ ಕಿರಿಯ ಸಹವರ್ತಿಗಳ ಮೂಲಕ ಮುಂದುವರೆದಿವೆ. ಕನ್ನಡದ ಗೌರವಾನ್ವಿತ ಸಾಹಿತಿಗಳನ್ನೊಳಗೊಂಡ ಕನ್ನಡ ಭಾಷಾಂತರ ಸಂಪಾದಕ ಮಂಡಳಿಯ ಆರಂಭ ಹಾಗೂ ಅದರ ದಶಕಗಳ ಕ್ರಿಯೆಯಲ್ಲಿ ಕೆ.ಜಿ.ಯವರ ಸತತ ಕಾರ್ಯಪ್ರವೃತ್ತತೆಯ ಕೊಡುಗೆ ಅಪಾರ. ಕೆ.ಜಿ.ಯವರ ಶಾಂತ, ಸಹಾನುಭೂತಿಪೂರ್ವಕ ಮಾರ್ಗದರ್ಶೀ ವ್ಯಕ್ತಿತ್ವ, ಅಧ್ಯಯನ ಕೇಂದ್ರದ ಸಹವರ್ತಿಗಳ ಆತ್ಮೀಯ ನೆನಪಲ್ಲಿ ಚಿರಂತನ.

# ಸತ್ಯ; ದೇವರು; ಸಾವು

**ನಮ್ಮ ದೃಷ್ಟಿಯಲ್ಲಿ ಸಾವು ಅಂದರೇನು?**

ನಮಗಿಷ್ಟವಿರಲಿ, ಇಲ್ಲದಿರಲಿ, ಸಾವು ನಮ್ಮೆಲ್ಲರನ್ನೂ ಕಾಯುತ್ತಿರುತ್ತದೆ, ನೀವು ಬಿರುದು ಬಾವಲಿಗಳು, ಸಂಪತ್ತು, ಸ್ಥಾನಮಾನ, ಕೆಂಪುಹಾಸು ಎಲ್ಲ ಇರುವ ಓರ್ವ ದೊಡ್ಡ ಸರಕಾರಿ ಅಧಿಕಾರಿಯಾಗಿರಬಹುದು, ಆದರೆ ಇದೆಲ್ಲದರ ಕೊನೆಯಲ್ಲಿ ಅನಿವಾರ್ಯವಾದುದು ಕಾದಿದೆ. ಆದುದರಿಂದ ನಮ್ಮ ದೃಷ್ಟಿಯಲ್ಲಿ ಸಾವು ಅಂದರೆ ಏನು? ನಮ್ಮ ಪ್ರಕಾರ ಸಾವು ಅಂದರೆ ಸಾತತ್ಯಕ್ಕೆ ಕೊನೆ ಹಾಡುವುದು ತಾನೆ? ಚರಮ ಮರಣ ಎಂಬುದಿದೆ, ನಾವು ಈ ಬಗ್ಗೆ ಕೊಂಚ ಆತಂಕಕ್ಕೆ ಒಳಗಾಗುತ್ತೇವೆ, ಆದರೆ ಯಾವುದಾದರೊಂದು ರೂಪದಲ್ಲಿ ಸಾತತ್ಯವನ್ನು ಕಂಡುಕೊಂಡರೆ ಅದೇನೂ ದೊಡ್ಡ ಸಂಗತಿಯಲ್ಲ. ಹೀಗಾಗಿ ಸಾವಿನ ಬಗ್ಗೆ ಪ್ರಶ್ನಿಸಿದಾಗ, ಸಾವಿನ ಅನಂತರವೂ ಬದುಕು ಇದೆಯೋ ಇಲ್ಲವೋ ಎಂಬ ಬಗ್ಗೆ ಕಾಳಜಿ ವಹಿಸುತ್ತೇವೆ. ಯಾವುದು ಮುಂದುವರಿಯುತ್ತದೆ? ನಿಶ್ಚಯವಾಗಿಯೂ ನಿಮ್ಮ ದೇಹವಲ್ಲ, ಏಕೆಂದರೆ ನಿತ್ಯವೂ ಸಾಯುವ ಮಂದಿಯ ದೇಹವನ್ನು ಹೂಳಲಾಗುತ್ತದೆ ಅಥವಾ ಸುಡಲಾಗುತ್ತದೆ.

> "ದುಃಖವಿರುವುದು ಸಾವಿನಲ್ಲಲ್ಲ,
> ಒಂಟಿತನದಲ್ಲಿ."
>
> – ಜೆ. ಕೃಷ್ಣಮೂರ್ತಿ

*

**ಯಾವುದು ಮುಂದುವರಿಯುತ್ತದೆ?**

ಹೀಗಾಗಿ ಅತೀಂದ್ರಿಯವಾದ ನಿರಂತರತೆ, ಮಾನಸಿಕ ಸಾತತ್ಯ, ಚಿಂತನೆಯ ಮುಂದುವರಿಕೆ, ಗುಣಲಕ್ಷಣದ ಸಾತತ್ಯ ಅದೇ ಆತ್ಮ ಅಥವಾ ನೀವೇನೇ ಹೇಳಿ ಅದು ಮುಂದುವರಿಯುತ್ತದೆ ಎಂದು ನಾವು ತಿಳಿದಿದ್ದೇವೆ. ಚಿಂತನೆ ಮುಂದುವರಿಯುತ್ತದೆಯೇ ಎಂಬುದನ್ನು ತಿಳಿಯಬೇಕಾಗಿದೆ. ಅಂದರೆ, ನಾನು ಧ್ಯಾನ ಮಾಡಿದ್ದೇನೆ, ಹಲವಾರು ಸಂಗತಿಗಳನ್ನು ಆಚರಿಸಿದ್ದೇನೆ, ನಾನಿನ್ನೂ ನನ್ನ ಪುಸ್ತಕವನ್ನು ಬರೆದು ಮುಗಿಸಿಲ್ಲ, ನನ್ನ ವೃತ್ತಿ ಜೀವನ ಇನ್ನೂ ಮುಗಿದಿಲ್ಲ, ನಾನು ದುರ್ಬಲ, ಬಲಶಾಲಿಯಾಗಲು ಇನ್ನೂ ಒಂದಷ್ಟು ಸಮಯಬೇಕು. ನಾನು ನನ್ನ ಸುಖವನ್ನು ಇನ್ನೂ ಮುಂದುವರಿಸಿಕೊಂಡು ಹೋಗಬೇಕು ಇತ್ಯಾದಿ – ಇದೆಲ್ಲದಕ್ಕೂ ಸಾವು ಕೊನೆ ಹಾಡಬಹುದೆಂಬ ಭಯ ನನಗೆ. ಹೀಗಾಗಿ ಸಾವು ಒಂದು ಬಗೆಯ ಹತಾಶೆಯಲ್ಲವೆ? ನಾನೇನೋ ಒಂದನ್ನು ಮಾಡುತ್ತಿದ್ದೇನೆ. ಅದನ್ನು ಮುಗಿಸಲು ನನಗೆ ಇಷ್ಟವಿಲ್ಲ; ನನ್ನನ್ನು ನಾನು ತೃಪ್ತಿಪಡಿಸಿಕೊಳ್ಳಲು ನನಗೆ ನಿರಂತರತೆ ಬೇಕು. ಆದರೆ ನಿರಂತರತೆಯ ಮೂಲಕ ತೃಪ್ತಿ ಕಂಡುಕೊಳ್ಳಲು ಸಾಧ್ಯವೇ? ಖಂಡಿತಕ್ಕೂ ನಿರಂತರತೆಯ ಮೂಲಕ ಒಂದು ಬಗೆಯ ತೃಪ್ತಿ ದೊರೆಯುತ್ತದೆ. ನಾನೊಂದು ಪುಸ್ತಕ ಬರೆಯುತ್ತಿದ್ದರೆ ಅದನ್ನು ಬರೆದು ಮುಗಿಸುವ ತನಕ ಸಾಯಲು ಬಯಸುವುದಿಲ್ಲ. ಒಂದು ಪಾತ್ರವನ್ನು ಬೆಳೆಸಲು ರೂಪಿಸಲು ನನಗೆ ಒಂದಿಷ್ಟು ಸಮಯಬೇಕು; ಹೀಗೆ...

*

ಹೀಗಾಗಿ, ತನ್ನನ್ನು ತಾನು ತೃಪ್ತಿಪಡಿಸಿಕೊಳ್ಳುವ ಆಸೆ ಇರುವತನಕ ಸಾವಿನ ಭಯ ಇದ್ದೇ ಇರುತ್ತದೆ. ಏಕೆಂದರೆ ತನ್ನನ್ನು ತೃಪ್ತಿ ಪಡಿಸಿಕೊಳ್ಳಲು ಸಮಯಬೇಕು, ದೀರ್ಘಾಯುಷ್ಯ ಬೇಕು, ನಿರಂತರತೆ ಬೇಕು. ಆದರೆ ಅನುಕ್ಷಣ ನೀವು ನಿಮ್ಮನ್ನು ತೃಪ್ತಿಪಡಿಸಿಕೊಳ್ಳಲು ಸಾಧ್ಯವಾದರೆ ನಿಮಗೆ ಸಾವಿನ ಭಯವಿಲ್ಲ.

ಈಗ, ಸಾವಿನ ಹೊರತಾಗಿಯೂ ನಿರಂತರತೆಯನ್ನು ಹೊಂದುವುದು ಹೇಗೆ ಎಂಬುದು ನಮ್ಮ ಸಮಸ್ಯೆಯಲ್ಲವೆ? ನೀವು ನನ್ನಿಂದ ಭರವಸೆಯನ್ನು ನಿರೀಕ್ಷಿಸುತ್ತಿದ್ದೀರಿ, ಆದರೆ ನಾನು ನಿಮಗೆ ಆ ಬಗ್ಗೆ ಭರವಸೆ ಕೊಡದಿದ್ದರೆ ನೀವು ಬೇರೊಬ್ಬರ ಬಳಿಗೆ ಹೋಗುತ್ತೀರಿ, ನಿಮ್ಮ ಗುರುಗಳ ಬಳಿಗೆ, ಗ್ರಂಥಗಳತ್ತ ಅಥವಾ ವಿವಿಧ ಬಗೆಯ ವಿಕರ್ಷಣೆಗಳು ಹಾಗೂ ಪಲಾಯನಗಳತ್ತ ಸರಿಯುತ್ತೀರಿ. ಹೀಗಾಗಿ, ನಿಮ್ಮ ಜತೆ ಮಾತನಾಡುತ್ತಿರುವ ನಾನು ಮತ್ತು ನನ್ನನ್ನು ಆಲಿಸುತ್ತಿರುವ ನೀವು ನಿರಂತರತೆ ಅಂದರೆ ನಿಜಕ್ಕೂ ಏನು ಎಂಬುದನ್ನು ಕಂಡು ಹಿಡಿಯೋಣ ಮತ್ತು ಯಾವುದು ಮುಂದುವರಿಯಬೇಕು ಎಂದು ಅಪೇಕ್ಷಿಸುತ್ತೇವೆ ಎಂಬುದನ್ನೂ ಕಂಡುಕೊಳ್ಳೋಣ. ಯಾವುದು ಮುಂದುವರಿಯುತ್ತದೋ ಅದು ಹಾರೈಕೆ, ಬಯಕೆ ತಾನೇ? ನಾನು ಬಲಶಾಲಿಯಲ್ಲ, ಆದರೆ ಬಲಶಾಲಿಯಾಗಬೇಕೆಂಬ ಆಸೆ ನನಗೆ. ನಾನು ಮನೆ ಕಟ್ಟಿಲ್ಲ, ಆದರೆ ಮನೆ ಕಟ್ಟುವ ಆಸೆ; ನಾನು ಸಂಪತ್ತನ್ನು ಶೇಖರಣೆ ಮಾಡಿಲ್ಲ. ಸದ್ಯ ಆ ಕೆಲಸ ಮಾಡುತ್ತೇನೆ. ಈ ಬದುಕಿನಲ್ಲಿ ನಾನು ದೇವರನ್ನು ಸಾಕ್ಷಾತ್ಕರಿಸಿಕೊಳ್ಳುತ್ತೇನೆ – ಇತ್ಯಾದಿ. ಹೀಗೆ, ನಿರಂತರತೆ ಎಂಬುದು ಬಯಕೆಯ ಪ್ರಕ್ರಿಯೆ. ಇದನ್ನು ಕೊನೆಗೊಳಿಸಿದಾಗ ಸಾವು ಎಂದು ಕರೆಯುತ್ತೀರಿ. ಅಲ್ಲವೇ? ಬಯಕೆಯು ಸಾಧನೆಯ ಸಾಧನವಾಗಿ, ನಿಮ್ಮನ್ನು ನೀವೇ ತೃಪ್ತಿಪಡಿಸಿಕೊಳ್ಳುವ ಪ್ರಕ್ರಿಯೆಯಾಗಿ ಮುಂದುವರಿಯಲಿ ಎಂದು ಅಪೇಕ್ಷಿಸುತ್ತೀರಿ. ಇದೆಲ್ಲ ತುಂಬ ಸರಳ ತಾನೆ?

*

**ಚಿಂತನೆ ಮುಂದುವರಿಯುತ್ತದೆ**

ಶಾರೀರಿಕವಾಗಿ ನೀವು ಅಳಿದರೂ ಚಿಂತನೆ ಮುಂದುವರಿಯುತ್ತದೆ. ಇದನ್ನು ಸಾಧಿಸಿ ತೋರಿಸಲಾಗಿದೆ. ಚಿಂತನೆ ಎಂಬುದು ನಿರಂತರತೆ. ಏಕೆಂದರೆ ಕಡೆಗೂ ನೀವು ಯಾರು? ನೀವು ಏನು? ನೀವು ಕೇವಲ ಒಂದು ಚಿಂತನೆ ಅಲ್ಲವೆ? ನೀವು ಹೆಸರಿನ, ಸ್ಥಾನದ, ಹಣದ ಒಂದು ಯೋಚನೆ; ನೀವು ಕೇವಲ ಒಂದು ವಿಚಾರ. ವಿಚಾರವನ್ನು ಕಿತ್ತೊಗೆಯಿರಿ, ಚಿಂತನೆಯನ್ನು ಕಿತ್ತು ಹಾಕಿ, ಆಗ ನೀವೆಲ್ಲಿರುತ್ತೀರಿ? ಹೀಗಾಗಿ, ನೀವು 'ನಾನು'ವನ್ನು ಪ್ರತಿನಿಧಿಸುವ ಚಿಂತನೆ. ಚಿಂತನೆಯು ನನ್ನನ್ನು ತೃಪ್ತಿ ಪಡಿಸಿಕೊಳ್ಳಲು ನನಗೆ ಸಹಕಾರಿ, ಕೊನೆಗೂ ಚಿಂತನೆ ನಿಜವನ್ನು ಕಂಡುಕೊಳ್ಳಲು ಸಹಾಯಕ, ಆದುದರಿಂದ ಚಿಂತನೆ ಮುಂದುವರಿಯಬೇಕು ಎಂದು ನೀವು ಹೇಳುತ್ತೀರಿ ಅಲ್ಲವೆ? ಆದುದರಿಂದಲೇ ಚಿಂತನೆ ಮುಂದುವರಿಯಲೆಂದು ನೀವು

ಆಶಿಸುತ್ತೀರಿ. ಚಿಂತನೆಯ ನಿಜವನ್ನು ಅಂದರೆ ನೀವು ಭಾವಿಸಿದ ಸಂತೋಷ, ದೇವರು ಅಥವಾ ಇನ್ನೇನನ್ನೋ ಕಂಡುಕೊಳ್ಳುವುದರಿಂದ ಅದು ಮುಂದುವರಿಯಲಿ ಎಂದು ನೀವು ಅಪೇಕ್ಷಿಸುತ್ತೀರಿ.

ಯೋಚನೆಯ ಸಾತತ್ಯದ ಮೂಲಕ ನೀವು ನಿಜವನ್ನು ಕಂಡುಕೊಳ್ಳುವಿರಾ? ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆಲೋಚನಾ ಪ್ರಕ್ರಿಯೆ ನಿಜವನ್ನು ಶೋಧಿಸುವುದೇ? ನಾನು ಹೇಳುತ್ತಿರುವುದು ಅರ್ಥವಾಗುತ್ತಿದೆ ತಾನೆ? ನನಗೆ ಸಂತೋಷ ಬೇಕು, ಆಸ್ತಿ, ಸ್ಥಾನಮಾನ, ಸಂಪತ್ತು, ಸ್ತ್ರೀ ಪುರುಷರು ಇತ್ಯಾದಿಗಳ ಮೂಲಕ ನಾನು ಅದನ್ನು ಅರಸುತ್ತೇನೆ. ಇದೆಲ್ಲವೂ ಸಂತೋಷ ಬೇಕೆಂಬ ಆಲೋಚನೆಯ ಬೇಡಿಕೆ ತಾನೆ? ಹಾಗಾದರೆ ಆಲೋಚನೆಯ ಸಂತೋಷವನ್ನು ಕಂಡುಹಿಡಿಯಲು ಸಾಧ್ಯವೇ?

"ನಾನು ಮತ್ತು ನನ್ನದು
ಪ್ರತಿನಿಮಿಷವೂ ಸಾಯುತ್ತಿರುವಾಗ ಅನಂತತೆ ಇರುತ್ತದೆ."

– ಜೆ. ಕೃಷ್ಣಮೂರ್ತಿ

*

**ಪುನರ್ನವೀಕರಣದಲ್ಲಿ ಸಾವಿಲ್ಲ**

ಈಗ ನಮ್ಮ ಪ್ರಶ್ನೆ ಏನೆಂದರೆ: ಪುನರ್ನವೀಕರಣ, ಮರುಉತ್ಪತ್ತಿ, ತಾಜಾತನ, ಹೊಸತನ ಸಾಧ್ಯವೇ? ಆಲೋಚನೆಯ ನಿರಂತರತೆಯ ಪ್ರಕ್ರಿಯೆಯ ಮೂಲಕ ಇದು ಸಾಧ್ಯವೇ? ಕಡೆಗೂ ಪುನರ್ನವೀಕರಣ ಇರುವುದಾದರೆ ನಾವು ಸಾವಿಗೆ ಹೆದರಬೇಕಾಗಿಲ್ಲ. ನಿಮಗೆ ಅನುಕ್ಷಣ ಪುನರ್ನವೀಕರಣ ಇರುವುದಾದರೆ ಸಾವಿಲ್ಲ. ಆದರೆ ಸಾವು ಇದೆ ಮತ್ತು ಸಾವಿನ ಭಯವೂ ಇದೆ. ಆಲೋಚನಾ ಪ್ರಕ್ರಿಯೆಯ ಸಾತತ್ಯವನ್ನು ನೀವು ಬಯಸಿದರೆ ಸಾವು, ಸಾವಿನ ಭಯ ಎರಡೂ ಇರುತ್ತದೆ.

*

**ಆಲೋಚನಾ ಪ್ರಕ್ರಿಯೆಯನ್ನು ಕೊನೆಗೊಳಿಸಿದ ಮೇಲೆ ಪುನರ್ನವೀಕರಣ**

ಸಾತತ್ಯದ ಮೂಲಕ ಪುನರ್ನವೀಕರಣವಿಲ್ಲ ಎಂಬ ಸತ್ಯವನ್ನು ನಾನು ಕಂಡು ಕೊಂಡರೆ ಭರವಸೆಯಿದೆ. ನಾನು ಇದನ್ನು ಗಮನಿಸಿದಾಗ, ಏನಾಗುತ್ತದೆ? ಆಗ ನಾನು ಅನುಕ್ಷಣದ ಆಲೋಚನಾ ಪ್ರಕ್ರಿಯೆಯನ್ನು ಕೊನೆಗೊಳಿಸುವ ಬಗ್ಗೆ ಕಾಳಜಿ ವಹಿಸುತ್ತೇನೆ. ಇದು ಹುಚ್ಚುತನವಲ್ಲ!

*

**ಪ್ರೇಮವು ತನ್ನಷ್ಟಕ್ಕೆ ತಾನೆ ಅಮರ**

ಪ್ರೇಮವಿರುವಲ್ಲಿ ಮರಣವಿಲ್ಲ; ಚಿಂತನೆಯ ಪ್ರಕ್ರಿಯೆ ಪ್ರಾರಂಭವಾದರೆ ಸಾವಿರುತ್ತದೆ. ಪ್ರೇಮವಿದ್ದಲ್ಲಿ ಸಾವಿಲ್ಲ. ಏಕೆಂದರೆ ಅಲ್ಲಿ ಭಯವಿಲ್ಲ. ಪ್ರೇಮವೆಂಬುದು ನಿರಂತರವಾದ ಸ್ಥಿತಿಯಲ್ಲ – ಹಾಗೆ ಆದರೆ ಅದು ಆಲೋಚನೆಯ ಪ್ರಕ್ರಿಯೆಯಾಗುತ್ತದೆ. ಪ್ರೇಮವು ಅನುಕ್ಷಣದಲ್ಲಿ ಇರುವಂಥದ್ದು. ಕ್ಷಣದಿಂದ ಕ್ಷಣಕ್ಕೆ ಗೋಚರಿಸುವಂಥದ್ದು. ಹೀಗಾಗಿ, ಪ್ರೇಮವು ತನ್ನಷ್ಟಕ್ಕೆ ತಾನೆ ಅಮರ.

*

**ಮರಣ ಮತ್ತು ಅಮರತ್ವ**

ಸಾವಿನಲ್ಲಿ ನಾವು ಅಮರತ್ವ ಕಾಣಬಯಸುತ್ತೇವೆ; ಹುಟ್ಟು ಸಾವಿನ ಚಲನೆಯಲ್ಲಿ ಶಾಶ್ವತ ಸ್ಥಿತಿಗಾಗಿ ಹಂಬಲಿಸುತ್ತೇವೆ. ಕಾಲ ಪ್ರವಾಹದಲ್ಲಿ ಸಿಲುಕಿದ ನಾವು ಕಾಲಾತೀತಕ್ಕಾಗಿ ಹಪಹಪಿಸುತ್ತೇವೆ; ನೆರಳಿನಲ್ಲಿದ್ದೂ ಬೆಳಕಿನಲ್ಲಿದ್ದೇವೆ ಎಂದು ನಂಬುತ್ತೇವೆ. ಸಾವು ಅಮರತ್ವದೆಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ; ಮರಣವಿಲ್ಲದ ಜೀವನದಲ್ಲಿ ಮಾತ್ರವೇ ಅಮರತ್ವವಿದೆ. ಜೀವನದಲ್ಲಿ ಸಾವಿದೆ ಎಂಬುದು ನಮಗೆ ಗೊತ್ತು. ಏಕೆಂದರೆ ನಾವು ಜೀವನಕ್ಕೆ ಜೋತು ಬಿದ್ದಿದ್ದೇವೆ. ನಾವು ಸಂಗ್ರಹಿಸಿ ಏನೋ ಆಗುತ್ತೇವೆ; ಏಕೆಂದರೆ ನಾವು ಸಂಗ್ರಹಿಸುತ್ತೇವೆ, ಸಾವು ಬರುತ್ತದೆ. ಸಾವಿದೆ ಎಂದು ತಿಳಿದೂ ನಾವು ಬದುಕಿಗೆ ಅಂಟಿಕೊಳ್ಳುತ್ತೇವೆ.

ಅಮರತ್ವದಲ್ಲಿನ ನಂಬಿಕೆ ಮತ್ತು ಭರವಸೆಯು ಅಮರತ್ವದ ಅನುಭವವಲ್ಲ. ಅಮರವಾಗ–ಬೇಕಾದರೆ ನಂಬಿಕೆ ಮತ್ತು ಭರವಸೆ ಇಲ್ಲವಾಗಬೇಕು. ನಂಬುವ ನೀವು, ಬಯಕೆಯ ಕರ್ತೃವಾದ ನೀವು ಅಮರರಾಗಬೇಕಾದರೆ ಇನ್ನಿಲ್ಲವಾಗಬೇಕು. ನಿಮ್ಮ ನಂಬಿಕೆ ಮತ್ತು ಭರವಸೆಯೇ ಸ್ವ ವನ್ನು ಬಲಪಡಿಸುತ್ತದೆ...

*

**ಸದ್ಯವು ಚಿರಂತನ**

ನಾವು ಬದುಕನ್ನು, ವರ್ತಮಾನವನ್ನು ಅರ್ಥಮಾಡಿಕೊಳ್ಳದೆ ಭವಿಷ್ಯದೆಡೆಗೆ, ಸಾವಿನೆಡೆಗೆ ಮೊಗಮಾಡುತ್ತೇವೆ...

ವರ್ತಮಾನ ಅಥವಾ ಸದ್ಯವು ಶಾಶ್ವತ. ಕಾಲದ ಮೂಲಕ ಕಾಲಾತೀತವನ್ನು ಅನುಭವಿಸಲಾಗುವುದಿಲ್ಲ. ಸದ್ಯವು ಸದಾ ಇರುವಂಥದ್ದು; ನೀವು ಭವಿಷ್ಯಕ್ಕೆ ಪಲಾಯನ ಮಾಡಿದರೂ ಸದ್ಯವು ಸದಾ ಇದ್ದೇ ಇರುತ್ತದೆ.

*

**ಉಳಿಯುವ ಸಂತಸವಿದೆಯೆ?**

ಉಳಿಯುವ ಸಂತಸವನ್ನು ಕಂಡುಕೊಳ್ಳುವ ಸಾಧ್ಯತೆ ಇದೆಯಾ? ಇದೆ, ಆದರೆ ಅದನ್ನು ಅನುಭವಿಸಲು ಸ್ವಾತಂತ್ರ್ಯಬೇಕು. ಸ್ವಾತಂತ್ರ್ಯವಿಲ್ಲದಿದ್ದರೆ, ಸತ್ಯವನ್ನು ಶೋಧಿಸಲು ಸಾಧ್ಯವಿಲ್ಲ. ಸ್ವಾತಂತ್ರ್ಯವಿಲ್ಲದಿದ್ದರೆ ವಾಸ್ತವದ ಅನುಭವವಾಗಲು ಸಾಧ್ಯವಿಲ್ಲ. ಉದ್ಧಾರಕರು, ಗುರುಗಳು, ನೇತಾರರು ಮುಂತಾದವರಿಂದ ಬಿಡುಗಡೆ ಪಡೆಯಬೇಕು. ಒಳಿತು ಕೆಡುಕಿನ ಸ್ವ ಆವರಣ ಗೋಡೆಗಳಿಂದ ಬಿಡುಗಡೆ ಗಳಿಸಬೇಕು; ಅಧಿಕಾರ ಮತ್ತು ಅನುಕರಣೆಯಿಂದ ಬಿಡುಗಡೆ, ಸ್ವ ದಿಂದ ಬಿಡುಗಡೆ, ಸಂಘರ್ಷ ಮತ್ತು ನೋವಿನ ಕಾರಣದಿಂದ ಬಿಡುಗಡೆ – ಹೀಗೆ ಎಲ್ಲದರಿಂದ ಬಿಡುಗಡೆ ಗಳಿಸಬೇಕು.

ನಿಜದ ಆನಂದಾನುಭವದಲ್ಲಿ ಅನುಭವಿ ಮತ್ತು ಅನುಭವ ಇಲ್ಲವಾಗುತ್ತದೆ. ನಿನ್ನೆಯ ನೆನಪುಗಳಿಂದ ಭಾರವಾದ ಹೃನ್ಮನಗಳು

# ಜೆ.ಕೆ. ಪುಸ್ತಕ ಮಾಲೆ ಪ್ರಕಟಣೆ

೧. ಧ್ಯಾನ ಚಿಂತನ
ಅನು. ಡಾ. ನಿ. ಮುರಾರಿ ಬಲ್ಲಾಳ ರೂ. ೫೦/-

೨. ಹಿಂಸೆಯನ್ನು ಮೀರಿ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೧೨೦/-

೩. ಮೊದಲ ಹಾಗೂ ಕೊನೆಯ ಬಿಡುಗಡೆ
ಅನು. ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿ ರೂ. ೨೦೦/-

೪. ಸಂಸ್ಕೃತಿ ಸಂಗತಿ
ಅನು. ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ ರೂ. ೧೫೦/-

೫. ಅನುದಿನ ಚಿಂತನ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫೦/-

೬. ಬಾಳಿಗೊಂದು ಭಾಷ್ಯ - ಸಂಪುಟ ೧
ಅನು. ಡಾ. ಮಹಾಬಲೇಶ್ವರರಾವ್ ರೂ. ೧೩೦/-

೭. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೦/-

೮. ಶಿಕ್ಷಣ ಮತ್ತು ಜೀವನ
ಅನು. ಡಾ. ಎಚ್.ಎಸ್. ರಾಘವೇಂದ್ರ ರಾವ್ ರೂ. ೬೫/-

೯. ಭಯದಾಚೆಯ ಬದುಕು
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೦/-

೧೦. ದುಃಖಕ್ಕೆ ವಿದಾಯ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೧. ಸಂಘರ್ಷವಿರದ ಬದುಕಿಗಾಗಿ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೨. ಸಂಬಂಧವೆಂದರೇನು?
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೩. ಜೆ.ಕೆ. ಜೀವನ ದರ್ಶನ
ಲೇಖಕರು : ನಿ. ಮುರಾರಿ ಬಲ್ಲಾಳ ರೂ. ೧೩೦/-

೧೪. ಜೆ. ಕೃಷ್ಣಮೂರ್ತಿ - ಶಿಕ್ಷಣ
ಅನು. (ದ್ವಿತೀಯ ಆವೃತ್ತಿ) ಎಸ್.ಡಿ. ಕಾಶೀಕರ ರೂ. ೯೦/-

೧೫. ತಿಳಿದುದೆಲ್ಲವ ಬಿಟ್ಟು...
ಅನು. ಪ್ರೊ. ಜಿ. ವೆಂಕಟಸುಬ್ಬಯ್ಯ ರೂ. ೯೦/-

೧೬. ಬಾಳಿಗೊಂದು ಭಾಷ್ಯ - ಸಂಪುಟ ೨
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೫೦/-

೧೭. ಪ್ರೀತಿ ಎಂದರೇನು?
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೧೮. ಬಾಳಿಗೊಂದು ಭಾಷ್ಯ ಸಂಪುಟ - ೩
ಅನು. ಡಾ|| ಮಹಬಲೇಶ್ವರ ರಾವ್ ರೂ. ೧೮೫/-

೧೯. ಅಸೂಯೆ
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ರೂ. ೩೦/-

೨೦. ಭಯ ನಿಮಗೇನು ಮಾಡೀತು ?
ಅನು. ಶ್ರೀ ಎಸ್. ದಿವಾಕರ್ ರೂ. ೪೦/-

೨೧. ಇನ್ನೊಬ್ಬರ ಬಗ್ಗೆ ಕಾಳಜಿ- ಹಾಗೆಂದರೇನು
ಅನು. ಡಾ|| ಹೆಚ್. ಎಸ್. ರಾಘವೇಂದ್ರ ರಾವ್ ರೂ. ೪೦/-

೨೨. ಸ್ವಾತಂತ್ರ್ಯ ಎಂದರೇನು?
ಅನು. ಶ್ರೀ ಗಿರೀಶ್ ವಾಘ್ ರೂ. ೪೦/-

೨೩. ಸಾವಿನೊಂದಿಗೆ ಬದುಕುವುದೆಂದರೆ?
ಅನು. ಡಾ|| ವನಮಾಲಾ ವಿಶ್ವನಾಥ್ ರೂ. ೨೫/-

೨೪. ಚಲನಶೀಲ ಬದುಕು – ಕಲಿಕೆ
ಅನು. ಡಾ|| ಮಹಾಬಲೇಶ್ವರ ರಾವ್ ರೂ. ೧೫೦/-

೨೫. ಬದುಕಿನ ಕಡೆಗೆ
ಅನು. ಶ್ರೀ ಎಸ್. ಡಿ. ಕಾಶೀಕರ್ ಮತ್ತು ರೂ. ೧೪೦/-
ಶ್ರೀಮತಿ ವನಮಾಲ ಆರ್. ರಾವ್

೨೬. ನೀವೇ ಲೋಕ, ನಿಮ್ಮೊಳಗೇ ಲೋಕ ರೂ. ೧೦೦/–
ಅನು. ಡಾ. ಮಹಾಬಲೇಶ್ವರ ರಾವ್

೨೭. ಮಾನವನಾಗುವುದು ರೂ. ೧೮೦/–
ಅನು. ಡಾ. ಮಹಾಬಲೇಶ್ವರ ರಾವ್

೨೮. ಆಯ್ಕೆಯ ನಿರರ್ಥಕತೆ
ಅನು. ಧರ್ಮಶ್ರೀ ಅಯ್ಯಂಗಾರ್ ರೂ. ೨೫/–

೨೯. ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ
ಅನು. ಶ್ರೀ ಓ. ಎಲ್. ನಾಗಭೂಷಣ ಸ್ವಾಮಿರೂ. ೨೫/–

೩೦. ಸ್ವಾತಂತ್ರ್ಯ, ಜವಾಬ್ದಾರಿ ಮತ್ತು ಶಿಸ್ತು
ಅನು. ಡಾ. ಸುವರ್ಣ ಬಿ.ಜೆ. ರೂ. ೨೫/–

೩೧. ಕಾಲ ಮತ್ತು ಕಾಲರಹಿತ
ಅನು. ಶ್ರೀಮತಿ ವನಮಾಲಾ ರಂಗನಾಥ ರಾವ್ರೂ. ೨೫/–

೩೨. ಧ್ಯಾನ ಮಗ್ನ ಮನಸ್ಸು
ಅನು. ಆಶಾ ಕೋಣಿ ರೂ. ೨೫/–

೩೩. ಕ್ರಿಯೆ ಮತ್ತು ಸಂಬಂಧ
ಅನು. ಶ್ರೀ ಬಿ.ಎ. ಸನದಿ ರೂ. ೨೫/–

೩೪. ಶಿಕ್ಷಣ
ಅನು. ಶ್ರೀ ಶ್ರೀಪತಿ ಕಾಶೀಕರ್ ರೂ. ೯೦/–

೩೫. ದೇವರು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೨೫/–

೩೬. ಒಲವು ಒಂಟಿತನ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೩೫/–

೩೭. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೫೦/–

೩೮. ಒಳಜಗತ್ತು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೮೦/–

೩೯. ಸಾಮಾಜಿಕ ಜವಾಬ್ದಾರಿ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೧೦/–

೪೦. ಶಿಕ್ಷಕನಿಗೆ ಶಿಕ್ಷಣ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೫೦/–

೪೧. ಲೋಕ ಶಿಕ್ಷಕ ಜೆ. ಕೃಷ್ಣಮೂರ್ತಿ–ಜೀವನ ಮತ್ತು ಬೋಧನೆ
ಆರ್.ಇ. ಮಾರ್ಕ್ ಲೀ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೨೫೦/–

ಶಾಶ್ವತ ವರ್ತಮಾನದಲ್ಲಿ ಬದುಕಲಾರವು. ಶಾಶ್ವತ ಜೀವಿಗಾಗಿ ಮನಸ್ಸು ಮತ್ತು ಹೃದಯ ದಿನವೂ ಸಾಯಬೇಕು...

ನಿಮ್ಮ ಅನುಭವಕ್ಕೆ ಇಲ್ಲವಾಗಿರಿ, ನಿಮ್ಮ ಸ್ಮೃತಿಗೆ ಇಲ್ಲವಾಗಿರಿ. ನಿಮ್ಮ ಪೂರ್ವಾಗ್ರಹಕ್ಕೆ ಇನ್ನಿಲ್ಲವಾಗಿರಿ. ನೀವು ಇಲ್ಲವಾದಂತೆ ಭ್ರಷ್ಟವಾಗದಿರುವುದು ಗೋಚರಿಸುತ್ತದೆ. ಇದು ಶೂನ್ಯ ಸ್ಥಿತಿಯಲ್ಲ. ಸೃಜನಶೀಲ ಜೀವಿಯ ಸ್ಥಿತಿ. ಇದೇ ಪುನರ್ನವವು ಅವಕಾಶ ಕಲ್ಪಿಸಿದರೆ, ಅದೆಷ್ಟೇ ಸಂಕೀರ್ಣವೂ ಯಾತನಾಮಯವೂ ಆಗಿದ್ದರೂ ನಮ್ಮ ಸಮಸ್ಯೆಗಳನ್ನು ಹಾಗೂ ದುಃಖಗಳನ್ನು ಪರಿಹರಿಸೀತು. ಸ್ವದ ಮರಣದಲ್ಲಿ ಮಾತ್ರವೇ ಜೀವನ.

"ತಿಳಿದಿರುವದೆಲ್ಲದರಿಂದ ಬಿಡುಗಡೆಯೇ ಸಾವು,
ಆಗ ನೀವು ಜೀವಿಸಿರುತ್ತೀರಿ"

– ಜೆ. ಕೃಷ್ಣಮೂರ್ತಿ

*

**ಸಾವಿನ ಭಯವೆಂದರೆ ನಮಗೆ ತಿಳಿದದ್ದು ಹೋಗುತ್ತದೆ ಎಂಬ ಭಯ**

ಸ್ವ ಎಂಬುದು ನೆನಪುಗಳ ಮೂಟೆ ಮಾತ್ರ. 'ನಾನು' ಅಥವಾ 'ನಾನು'ವಿನಿಂದ ಹೊರತಾದ ಆಧ್ಯಾತ್ಮಿಕ ಅಸ್ತಿತ್ವವಿಲ್ಲ. ಏಕೆಂದರೆ 'ನಾನು'ವಿನಿಂದ ಹೊರತಾದ ಆಧ್ಯಾತ್ಮಿಕ ಅಸ್ತಿತ್ವ ಇದೆ ಎಂದು ನೀವು ಹೇಳಿದಾಗ ಅದು ಆಗಲೂ ಚಿಂತನೆಯ ಫಲವಾಗಿರುತ್ತದೆ; ಆದುದರಿಂದ, ಅದಿನ್ನೂ ಚಿಂತನೆಯ ಪರಿಧಿಯಲ್ಲೇ ಇರುತ್ತದೆ. ಚಿಂತನೆಯು ಸ್ಮೃತಿ. ಹೀಗಾಗಿ, 'ನೀನು', 'ನಾನು' ಸ್ವವನ್ನು ಸ್ಥಿರಗೊಳಿಸಬಹುದು – ಅದು ಸ್ಮೃತಿ. ನಮ್ಮ ಪ್ರಕಾರ ಸಾವು ಅಂದರೆ ಏನು? ಸತತವಾಗಿ ಬಳಕೆಯಾದದ್ದು ಕೊನೆಗೊಳ್ಳುತ್ತದೆ. ಬಿಡುವಿಲ್ಲದೆ ಬಳಕೆಮಾಡಿದ ಯಂತ್ರ ಸವೆಯುತ್ತದೆ. ಅಂತೆಯೇ ಸತತವಾಗಿ ಬಳಕೆಯಾದ ದೇಹವು ರೋಗರುಜಿನಗಳ ಮೂಲಕ, ಅಪಘಾತದ ಮೂಲಕ, ಪ್ರಾಯವಾಗುವ ಮೂಲಕ ಕೊನೆ ಮುಟ್ಟುತ್ತದೆ. ಇದು ಅನಿವಾರ್ಯ – ಅದು ಹತ್ತು ವರ್ಷ ಅಥವಾ ನೂರು ವರ್ಷ ಬಾಳಿಕೆ ಬರಬಹುದು, ಆದರೆ ಬಳಸುತ್ತಾ ಬಂದುದರಿಂದ ಸವೆದು ಮರೆಯಾಗುತ್ತದೆ. ನಾವು ಇದನ್ನು ಗುರುತಿಸಿ ಒಪ್ಪಿಕೊಳ್ಳುತ್ತೇವೆ. ಏಕೆಂದರೆ ಸತತವಾಗಿ ನಡೆಯುತ್ತಿರುವುದನ್ನು ನಾವು ಕಾಣುತ್ತಲೇ ಇದ್ದೇವೆ.

*

**ತಿಳಿದದ್ದು**

ನಿಮಗೆ ಅಜ್ಞಾತದ ಜೊತೆ ನೇರ ಸಂಬಂಧವಿಲ್ಲ, ಹೀಗಾಗಿ ನಿಮಗೆ ಸಾವಿನ ಬಗ್ಗೆ ಭಯ.

ನಿಮಗೆ ಬದುಕಿನ ಬಗ್ಗೆ ಏನು ಗೊತ್ತಿದೆ? ನಿಮಗೆ ಗೊತ್ತಿರುವುದು ಬಹಳ ಅಲ್ಪ. ಆಸ್ತಿ, ನೆರೆಹೊರೆಯವರು, ನಿಮ್ಮ ಹೆಂಡತಿ, ವಿಚಾರಗಳು, ಇವುಗಳ ಜತೆಗಿನ ನಿಮ್ಮ ಸಂಬಂಧಗಳ ಬಗ್ಗೆ ನಿಮಗೆ ತಿಳಿದಿಲ್ಲ. ನಿಮಗೆ ಕೇವಲ ಮೇಲು ಮೇಲಿನ ಸಂಗತಿಗಳು ಮಾತ್ರ ಗೊತ್ತು. ನೀವು ಈ ತೋರಿಕೆಯ ಸಂಗತಿಗಳನ್ನು ಮುಂದುವರಿಸಲು ಬಯಸುತ್ತೀರಿ. ದೇವರಾಣೆಗೂ ಇದೆಂಥ ಶೋಚನೀಯ ಜೀವನ! ನಿರಂತರತೆ ಎಂಬುದು ಮೂರ್ಖತನವಲ್ಲವೆ?

*

**ಜೀವನ ಮರಣಗಳು ಒಂದೇ**

ಇನ್ನೂ ಬದುಕಿಬೇಕು ಎಂದು ಬಯಸುವವನೊಬ್ಬ ಮೂರ್ಖ – ಜೀವನದ ಸಮೃದ್ಧ ಭಾವನೆಗಳನ್ನು ಮನವರಿಕೆ ಮಾಡಿಕೊಂಡ ಯಾವ ವ್ಯಕ್ತಿಯೂ ನಿರಂತರತೆಯನ್ನು ಬಯಸಲಾರ. ನೀವು ಜೀವನವನ್ನು ಅರ್ಥಮಾಡಿಕೊಂಡರೆ, ಅಜ್ಞಾತವನ್ನು ಕಂಡುಕೊಳ್ಳುವಿರಿ, ಏಕೆಂದರೆ ಜೀವನವೇ ಅಜ್ಞಾತ ಮತ್ತು ಮರಣ ಹಾಗೂ ಜೀವನವೆರಡೂ ಒಂದೇ. ಜೀವನ್ಮರಣಗಳ ನಡುವೆ

ಈ ವಾರ್ತಾಪತ್ರದ ಸಂಚಿಕೆಗಳನ್ನು ನಿಯಮಿತವಾಗಿ ಪಡೆಯಲಿಚ್ಛಿಸುವವರು ತಮ್ಮ ಹಾಗೂ ಇತರ ಆಸಕ್ತ ಸ್ನೇಹಿತರ ವಿಳಾಸಗಳನ್ನು (ಪಿನ್ ಕೋಡ್ ಮತ್ತು ಈ-ಮೇಲ್ ಸಹಿತ) ಈ ಕೆಳಗೆ ಭರ್ತಿ ಮಾಡಿ ಕೊನೆಯ ಪುಟದಲ್ಲಿರುವ ವಿಳಾಸಕ್ಕೆ ಬರೆಯಿರಿ.

1

2

**ಕನ್ನಡ ಭಾಷಾಂತರ ಸಮಿತಿ ಸದಸ್ಯರು**

ಪ್ರೊ|| ಓ.ಎಲ್. ನಾಗಭೂಷಣ ಸ್ವಾಮಿ, ಡಾ|| ವನಮಾಲಾ ವಿಶ್ವನಾಥ್

ಡಾ|| ಎಚ್.ಎಸ್. ರಾಘವೇಂದ್ರರಾವ್

ಶ್ರೀ ಕೆ.ಜಿ. ಕುಲಕರ್ಣಿ, ಶ್ರೀಮತಿ ಸ್ವಪ್ನಾ ಸಂತೋಷ್

ಭೇದವಿಲ್ಲ. ಮೂರ್ಖರು ಮತ್ತು ಅಜ್ಞಾನಿಗಳು ಮಾತ್ರವೇ ಹೀಗೆ ಭೇದವೆಣಿಸುವವರು. ತಮ್ಮ ದೇಹ ಮತ್ತು ತಮ್ಮ ನಿರಂತರತೆಯ ಬಗ್ಗೆ ಕಾಳಜಿ ಉಳ್ಳವರು ಮಾತ್ರವೇ ಇಂಥ ಭೇದವನ್ನು ಬಗೆವವರು. ಇಂಥ ವ್ಯಕ್ತಿಗಳು ತಮ್ಮ ಭಯವನ್ನು ಮರೆಮಾಚಲು, ತಮ್ಮ ಮೂರ್ಖ ಅಲ್ಪ ಸಾತತ್ಯಕ್ಕೆ ಭರವಸೆ ಎಂದು ತಿಳಿಯಲು ಪುನರ್ಜನ್ಮ ಸಿದ್ಧಾಂತವನ್ನು ಒಂದು ಸಾಧನವನ್ನಾಗಿ ಬಳಸಿಕೊಳ್ಳುತ್ತಾರೆ. ಚಿಂತನೆ ಮುಂದುವರಿಯುತ್ತದೆ ಎಂಬುದು ಖಂಡಿತ.

ಆದರೆ ಖಂಡಿತಕ್ಕೂ ಚಿಂತನೆಯು ನಮ್ಮನ್ನು ಸತ್ಯದೆಡೆಗೆ ಕರೆದೊಯ್ಯುವುದಿಲ್ಲ. ಸತ್ಯವನ್ನು ಅರಸುವವನು ಚಿಂತನೆಯ ಬಗ್ಗೆ ಚಿಂತೆ ಮಾಡುವುದಿಲ್ಲ. ಪುನರ್ಜನ್ಮದ ಮೂಲಕ 'ನಾನು'ವನ್ನು ಸತ್ಯದೆಡೆಗೆ ಮುಂದುವರಿಸುವ ಸಿದ್ಧಾಂತವು ಹುಸಿ ವಿಚಾರ, ಅದು ಅಸತ್ಯ. ಈ 'ಮಾತು' ಸ್ಮೃತಿಗಳ ಮೂಟೆ, ಹಾಗಂದರೆ ಅದು ಕಾಲ. ಕಾಲದ ಮುಂದುವರಿಕೆಯು ನಮ್ಮನ್ನು ಚಿರಂತನದ ಕಡೆಗೆ ಕರೆದೊಯ್ಯುವುದಿಲ್ಲ. ಚಿರಂತನವು ಕಾಲಾತೀತ. ಅಜ್ಞಾತ ಅಥವಾ ಅಜ್ಞೇಯವು ನಿಮ್ಮೆದೆಯನ್ನು ಹೊಕ್ಕಾಗ ಸಾವಿನ ಭಯ ಕೊನೆಗೊಳ್ಳುತ್ತದೆ. ಜೀವನವು ಅಜ್ಞಾತ, ಅಜ್ಞೇಯ, ಅಂತೆಯೇ ಮರಣವೂ ಅಜ್ಞಾತ, ಅಜ್ಞೇಯ. ಅದೇ ರೀತಿ ಸತ್ಯ ಕೂಡಾ ಅಜ್ಞೇಯ.

*

**'ಸ್ವ' ದಿಂದ ಬಿಡುಗಡೆ ಸಾಧ್ಯ ಇಲ್ಲವೇ?**
**ಈ ಸುಂದರ ಪ್ರದರ್ಶನವನ್ನು ನೋಡಲು ಮರೆಯದಿರಿ**

ಸ್ವಾಮಿ, ಜೀವನವು ಅಜ್ಞೇಯ – ಅಜ್ಞಾತ; ಆದರೆ ನಾವು ಆ ಜೀವನದ ಒಂದು ಸಣ್ಣ ರೂಪಕ್ಕೆ ಅಂಟಿಕೊಳ್ಳುತ್ತೇವೆ. ನಾವು ಯಾವುದಕ್ಕೆ ಅಂಟಿಕೊಳ್ಳುತ್ತೇವೋ ಅದು ಕೇವಲ ಸ್ಮೃತಿ; ಅದು ಅಪೂರ್ಣ ಚಿಂತನೆ. ಹೀಗಾಗಿ, ನಾವು ಯಾವುದಕ್ಕೆ ಜೋತುಬಿದ್ದಿದ್ದೇವೋ ಅದು ಅವಾಸ್ತವ; ಅದಕ್ಕೆ ಬೆಲೆಯಿಲ್ಲ. ಮನಸ್ಸು ರೊಳ್ಳಾಗಿರುವ ಆ ನೆನಪುಗಳಿಗೆ ಜೋತುಬೀಳುತ್ತದೆ, ನೆನಪು ಅಂದರೆ ಮನಸ್ಸು, ಸ್ವ, ನೀವು ಅದನ್ನು ಹೇಗೆ ಬೇಕಾದರೂ ಕರೆಯಿರಿ. ಜ್ಞಾತದ ವಲಯದಲ್ಲಿರುವ ಮನಸ್ಸು, ಎಂದಿಗೂ ಅಜ್ಞೇಯವನ್ನು ಆಹ್ವಾನಿಸಲಾರದು. ಅಜ್ಞೇಯ ಅಥವಾ ಅಜ್ಞಾತ ಇರುವಾಗ, ಪರಿಪೂರ್ಣ ಅನಿಶ್ಚಿತತೆ ಇರುವಾಗ ಭಯ ಕೊನೆಗೊಳ್ಳುತ್ತದೆ. ಅದರ ಜತೆಗೆ ವಾಸ್ತವದ ಪರಿಭಾವನೆಯೂ ಕೊನೆಯಾಗುತ್ತದೆ.

*

**ದೇವರು ಅಂದರೇನು?**

ನೀವು ಹೇಗೆ ಕಂಡು ಹಿಡಿಯುವಿರಿ? ಬೇರೆಯವರು ಕೊಡುವ ಮಾಹಿತಿಯನ್ನು ಒಪ್ಪಿಕೊಳ್ಳುವಿರಾ? ಅಥವಾ ದೇವರು ಅಂದರೆ ಏನು ಎಂಬುದನ್ನು ಸ್ವತಃ ನೀವೇ ಶೋಧಿಸುವಿರಾ?


❐

**ಆತ್ಮೀಯ ಸಹಪಯಣಿಗರಿಗೆ, ಶುಭಾಶಯಗಳು. ನಮ್ಮ ಈ 'ಸಹಪಯಣ' ವಾರ್ತಾಪತ್ರಿಕೆ ಸುಮಾರು ಇಪ್ಪತ್ತೊಂದು ವರ್ಷಗಳ ಕಾಲ ಮುದ್ರಿತರೂಪದಲ್ಲಿ ಪ್ರಕಟಗೊಳ್ಳುತ್ತಿದೆ. ಈ ಸಂಚಿಕೆ, ಮುದ್ರಿತರೂಪದ ಕೊನೆಯ ಸಂಚಿಕೆಯಾಗಿದೆ. ಮುಂದಿನ ಸಂಚಿಕೆಯಿಂದ ಸಹಪಯಣ ಪತ್ರಿಕೆ ಡಿಜಿಟಲ್ ರೂಪದಲ್ಲಿ ಮಾತ್ರ ಪ್ರಕಟವಾಗಲಿದೆ. ಈ ಮುಂದಿನ ಸಂಚಿಕೆಗಳು** www.kfistudy.org **ಅಂತರ್ಜಾಲತಾಣದಲ್ಲಿ ಲಭ್ಯವಾಗಲಿವೆ. ವೈಯುಕ್ತಿಕವಾಗಿ ಪಡೆಯಲಿಚ್ಛಿಸುವವರು** kfistudy@gmail.com **ಮಿಂಚಂಚೆ ವಿಳಾಸಕ್ಕೆ ವಿಷಯದಲ್ಲಿ 'ಸಹಪಯಣ' ನಮೂದಿಸಿ ಮಿಂಚಂಚೆ ಕಳಿಸಿ. ನಿಮ್ಮ ಸಹಕಾರಕ್ಕೆ ಧನ್ಯವಾದಗಳು.**

ಖಾಸಗಿ ಪ್ರಸಾರಕ್ಕಾಗಿ ಮಾತ್ರ
*(For private circulation only)*

Book Packet containing periodicals.
Price : Single copy Rs. 5/-

Book-Post



Printed, Published and Owned by:
Director
**The Study: Bangalore Education Centre**
Krishnamurti Foundation India
Thatguni Post, Bangalore - 560 082.
Tel.: 080 - 28435243, 28435240 Extn. 114
Mob : 9482641389
Email : kfistudy@gmail.com
Website : www.kfistudy.org
Editor : Smt. Sushma Inamdar